JANUARY 19, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಬೆಳಗಾವಿ ಜಿಲ್ಲೆ ನಂದಗಡದಲ್ಲಿ,** ವೀರಭೂಮಿ, ಸಂಗೊಳ್ಳಿ ರಾಯಣ್ಣ ವಸ್ತುಸಂಗ್ರಹಾಲಯ, ಇಂದು ಮಧ್ಯಾಹ್ನ, ಮುಖ್ಯಮಂತ್ರಿ ಲೋಕಾರ್ಪಣೆ.
- **ಚಾಲುಕ್ಯ ಉತ್ಸವ:** ಬಾಗಲಕೋಟೆ ಜಿಲ್ಲೆ, ಬಾದಾಮಿಯಲ್ಲಿ ಇಂದು ಸಂಜೆ, ಸಿದ್ದರಾಮಯ್ಯ ಚಾಲನೆ.
- **ಇ–ಆಫೀಸ್ ತಂತ್ರಾಂಶ ಬಳಕೆ:** ಕಲಬುರಗಿ ಜಿಲ್ಲಾ ಪಂಚಾಯಿತಿ, ರಾಜ್ಯಕ್ಕೆ ಪ್ರಥಮ ಸ್ಥಾನ.
- **ಕರ್ನಾಟಕ ಒಲಿಂಪಿಕ್ಸ್ ಕ್ರೀಡಾಕೂಟ, ತುಮಕೂರು:** ಜುಡೋ ಸ್ಪರ್ಧೆಯಲ್ಲಿ, ವಿಜಯಪುರದ ಎಸ್. ಆರತಿಗೆ, ಸ್ವರ್ಣ.

<><><>

**ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು,** ನಂದಗಡದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರ, 75 ಕೋಟಿ ರೂಪಾಯಿ ವೆಚ್ಚದಲ್ಲಿ, ನೂತನವಾಗಿ ನಿರ್ಮಿಸಿದ, ಸಂಗೊಳ್ಳಿ ರಾಯಣ್ಣ ವಸ್ತು ಸಂಗ್ರಹಾಲಯ ಹಾಗೂ ವೀರಭೂಮಿಯನ್ನು, ಇಂದು ಮಧ್ಯಾಹ್ನ 12 ಗಂಟೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಗೊಳಿಸಲಿದ್ದಾರೆ. ನಂದಗಡ ಕೆರೆ ಸಮೀಪ ನಿರ್ಮಿಸಲಾದ, ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಸೇರಿದಂತೆ, ರಾಯಣ್ಣನವರನ್ನು ಬ್ರಿಟಿಷರು ಗಲ್ಲಿಗೇರಿಸಿದ ನಂದಗಡದಲ್ಲಿ, ರಾಯಣ್ಣ ಹಾಗೂ ಅವರ ಜೀವನ ವೃತ್ತಾಂತ, ಸಾಹಸಮಯ ಹೋರಾಟವನ್ನು ಪ್ರತಿಬಿಂಬಿಸುವ, ವಸ್ತು ಸಂಗ್ರಹಾಲಯ, ಸಾರ್ವಜನಿಕ ವೀಕ್ಷಣೆಗೆ ಇಂದಿನಿಂದ ಮುಕ್ತಗೊಳ್ಳಲಿದೆ. ಸಚಿವರಾದ ಶಿವರಾಜ ತಂಗಡಗಿ, ಸತೀಶ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ, ಖಾನಾಪುರ ಶಾಸಕ ವಿಠ್ಠಲ ಹಲಗೇಕರ ಸೇರಿದಂತೆ, ರಾಯಣ್ಣನವರ ವಂಶಜರು, ಅನೇಕ ಗಣ್ಯರು, ಪಾಲ್ಗೊಳ್ಳಲಿದ್ದಾರೆ.

<><><>

**ಚಾಲುಕ್ಯ ಉತ್ಸವ,** ಜನೋತ್ಸವವಾಗಿ, ಇಂದಿನಿಂದ, ಮೂರು ದಿನಗಳ ಕಾಲ, ವಿಜೃಂಭಣೆಯಿಂದ ಜರುಗಲಿದೆ. ಚಾಲುಕ್ಯರ ನಾಡಿನ, ಐತಿಹಾಸಿಕ ಶಿಲ್ಪಕಲೆಯ ತಾಣಗಳಾದ, ಬಾಗಲಕೋಟೆ ಜಿಲ್ಲೆಯ, ಬಾದಾಮಿ, ಐಹೊಳೆ ಹಾಗೂ ಪಟ್ಟದಕಲ್ಲಿನಲ್ಲಿ, ನಾಲ್ಕು ವರ್ಷಗಳ ಬಳಿಕ, ವೈಭವದ ಚಾಲುಕ್ಯ ಉತ್ಸವ –2026ನ್ನು, ರಾಜ್ಯ ಸರ್ಕಾರ ಆಯೋಜಿಸಿದೆ. ಇಂದು ಸಂಜೆ 6.30ಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬಾದಾಮಿಯ ಇಮ್ಮಡಿ ಪುಲಿಕೇಶಿ ಪ್ರಧಾನ ವೇದಿಕೆಯಲ್ಲಿ, ಚಾಲುಕ್ಯ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ನಾಳೆ ಐಹೊಳೆ ಹಾಗೂ ನಾಡಿದ್ದು ಪಟ್ಟದಕಲ್ಲಿನಲ್ಲಿ, ಚಾಲುಕ್ಯ ಉತ್ಸವ, ಚಾಲುಕ್ಯರ ಶಿಲ್ಪಾಕಲಾ ಕೊಡುಗೆಗಳನ್ನು ಪ್ರತಿಬಿಂಬಿಸಲಿದೆ ಎಂದು, ಬಾದಾಮಿಯಲ್ಲಿ ನಿನ್ನೆ ಸಂಜೆ, ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿದ, ಜಿಲ್ಲಾ ಉಸ್ತುವಾರಿ ಸಚಿವ, ಆರ್.ಬಿ. ತಿಮ್ಮಾಪೂರ, ತಿಳಿಸಿದರು.

<><><>

***ನಾಡಿನ ಐತಿಹಾಸಿಕ ಪರಂಪರೆ, ಶಿಲ್ಪಕಲಾ ವೈಭವವನ್ನು ಸ್ಮರಿಸುವ, ಚಾಲುಕ್ಯ ಉತ್ಸವಕ್ಕೆ ಪೂರ್ವಭಾವಿಯಾಗಿ, ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಚಾಲುಕ್ಯ ರಥಯಾತ್ರೆಗೆ ಈಗಾಗಲೇ ಚಾಲನೆ ನೀಡಿದ್ದು, ಇಂದು ರಥಯಾತ್ರೆ ಬಾದಾಮಿಗೆ ತಲುಪಿ, ಭವ್ಯ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದೆ. ಚಾಲುಕ್ಯ ಸಾಮ್ರಾಜ್ಯ, ಉತ್ತರದಲ್ಲಿ ನರ್ಮದಾ ನದಿಯಿಂದ, ದಕ್ಷಿಣದಲ್ಲಿ ಕಾವೇರಿ ನದಿ ವರೆಗೂ ವಿಸ್ತರಿಸಿತ್ತು. ಚಾಲುಕ್ಯ ಅರಸಿಯರಾದ, ಲೋಕಮಹಾದೇವಿ ಹಾಗೂ ತ್ರೈಲೋಕ ಮಹಾದೇವಿ, ಪಟ್ಟದಕಲ್ಲಿನಲ್ಲಿ ವಿಶಿಷ್ಟ ಚಾಲುಕ್ಯ ವಾಸ್ತುಶಿಲ್ಪದ ದೇವಾಲಯಗಳನ್ನು ನಿರ್ಮಿಸಿದರು. ಭಾರತೀಯ ಪುರಾತತ್ವ ಇಲಾಖೆ ಸುಪರ್ದಿಯಲ್ಲಿ, ಪ್ರಸ್ತುತ ಈ ಐತಿಹಾಸಿಕ ದೇಗುಲಗಳು, ಶಿಲ್ಪಕಲೆ ಸ್ಮಾರಕಗಳು, ವಾಸ್ತುಶಿಲ್ಪ***

***ಪರಂಪರೆ, ಸಂರಕ್ಷಿತ ಪ್ರದೇಶವಾಗಿ, ನಿರ್ವಹಿಸಲ್ಪಡುತ್ತಿದೆ. ಪಸ್ತುತ ಮೂರು ದಿನಗಳ ಚಾಲುಕ್ಯ ಉತ್ಸವ, ನಾಡಿನ ಭವ್ಯ ಸಂಸ್ಕೃತಿ, ಶಿಲ್ಪಕಲಾ ಪರಂಪರೆಯನ್ನು ಸಾರುವ ಮೂಲಕ, ಪ್ರವಾಸೋದ್ಯಮವನ್ನು ಉತ್ತೇಜಿಸುವ, ಉದ್ದೇಶ ರಾಜ್ಯ ಸರ್ಕಾರ ಹೊಂದಿದೆ.***

<><><>

**ಕ್ರಿಸ್ತ ಶಕ ಐದನೇ ಶತಮಾನದ** ಅಂತ್ಯದಲ್ಲಿ ಚಾಲುಕ್ಯ ಸಾಮ್ರಾಜ್ಯ, ಆಳ್ವಿಕೆ ಆರಂಭಿಸಿತು. ಚಾಲುಕ್ಯ ರಾಜಮನೆತನದ ಅನನ್ಯ ಕೊಡುಗೆಗಳ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಭಾರತೀಯ ಪುರಾತತ್ವ ಇಲಾಖೆ, ಧಾರವಾಡ ವೃತ್ತದ, ಅಧೀಕ್ಷಕ ಪುರಾತತ್ವವಿದ, ರಮೇಶ ಮೂಲಿಮನಿ. . . .

<><><>

**ಗದಗ ಜಿಲ್ಲೆ, ಲಕ್ಕುಂಡಿಯ 16 ತಾಣಗಳನ್ನು,** ಈಗಾಗಲೇ ರಾಜ್ಯ ಸಂರಕ್ಷಿತ ಸ್ಮಾರಕಗಳು ಎಂದು, ಘೋಷಿಸಲಾಗಿದೆ; ಇನ್ನು 8 ದೇಗುಲಗಳನ್ನು ಫೆಬ್ರುವರಿ ಅಂತ್ಯದೊಳಗೆ, ಸಂರಕ್ಷಿತ ಸ್ಮಾರಕಗಳೆಂದು, ಪ್ರಕಟಿಸುವುದಾಗಿ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಗದಗ ಜಿಲ್ಲಾಧಿಕಾರಿ ಕಚೇರಿಯಲ್ಲಿ, ಸಭೆ ಬಳಿಕ ಮಾಹಿತಿ ನೀಡಿದ ಸಚಿವರು, ಲಕ್ಕುಂಡಿಯ ಇನ್ನು 20 ದೇವಸ್ಥಾನ ಹಾಗೂ ಬಾವಿಗಳನ್ನು, ರಾಜ್ಯ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಸೇರಿಸಲು, ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ ಪ್ರಸ್ತಾವ ಸಿದ್ಧ ಪಡಿಸಲಿದೆ. ಲಕ್ಕುಂಡಿಯ ಒಟ್ಟು 44 ತಾಣಗಳು, ಸರ್ಕಾರದ ನೇರ ಉಸ್ತುವಾರಿಗೆ ಒಳಪಡಲಿದ್ದು, ಲಕ್ಕುಂಡಿಯ ಆಯ್ದ 5 ದೇವಸ್ಥಾನಗಳು ಮತ್ತು 1 ಪ್ರಾಚೀನ ಬಾವಿಯ ಸಮಗ್ರ ಅಭಿವೃದ್ಧಿಗಾಗಿ, 10 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಲಕ್ಕುಂಡಿಯ ಕಲಾ ವೈಭವದ ಅಧ್ಯಯನಕ್ಕೆ, 1 ಕೋಟಿ 65 ಲಕ್ಷ ರೂಪಾಯಿ ವೆಚ್ಚದಲ್ಲಿ, ಬಯಲು ವಸ್ತು ಸಂಗ್ರಹಾಲಯ ನಿರ್ಮಾಣವಾಗಲಿದೆ, ಎಂದರು.

<><><>

**ಸರ್ಕಾರಿ ಕಚೇರಿಗಳಲ್ಲಿ,** ಕಡತಗಳ ತ್ವರಿತ ವಿಲೇವಾರಿಗೆ, ತಂತ್ರಜ್ಞಾನದ ಸಮರ್ಪಕ ಬಳಕೆಗೆ ಒತ್ತು ನೀಡಿದ ಪರಿಣಾಮ, ಇ–ಆಫೀಸ್ ತಂತ್ರಾಂಶ ಬಳಕೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ, ಕಲಬುರಗಿ ಜಿಲ್ಲಾ ಪಂಚಾಯಿತಿ, ಇಡೀ ರಾಜ್ಯಕ್ಕೆ ನಂಬರ್–1 ಸ್ಥಾನ ಪಡೆದುಕೊಂಡಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

<><><>

**ಜಿಲ್ಲಾ ಪಂಚಾಯಿತಿ ಸಿ.ಇ.ಓ ಭಂವರ್ ಸಿಂಗ್** ಮೀನಾ, ಮಾಹಿತಿ ನೀಡಿ, 2025 ನೇ ಸಾಲಿನಲ್ಲಿ, ಕಲಬುರಗಿ ಜಿಲ್ಲೆಯಲ್ಲಿ, 54 ಸಾವಿರದ 381 ಕಡತಗಳು, 3 ಲಕ್ಷ 52 ಸಾವಿರದ 221 ಇ–ರಸೀದಿ ವಿಲೇವಾರಿ ಮಾಡಲಾಗಿದೆ. ಸಾರ್ವಜನಿಕರು ಕಚೇರಿಗೆ ಸಲ್ಲಿಸುವ ಅರ್ಜಿಗಳನ್ನು, ಇ–ಆಫೀಸ್ ಸಹಾಯದಿಂದ ಪ್ರಥಮಾದ್ಯತೆ ಮೇಲೆ, ಕಡತ ವಿಲೇವಾರಿ ಮಾಡಿ, ಪತ್ರಗಳಿಗೆ ಭೌತಿಕ ಸಹಿ ಬದಲಾಗಿ, ಡಿಜಿಟಲ್ ಸಹಿವುಳ್ಳ ಪತ್ರದ ಮೂಲಕ ವ್ಯವಹರಿಸಲಾಗುತ್ತಿದೆ, ಎಂದರು.

<><><>

**ದಕ್ಷಿಣ ಗುಜರಾತಿನ ಕರಾವಳಿಯ, ಮುಂಬೈ ಬಳಿಯ,** ಕೇಂದ್ರಾಡಳಿತ ಪ್ರದೇಶ, ಡಿಯು ದಮನ್ ನಲ್ಲಿ ಇತ್ತೀಚೆಗೆ ಸಮಾರೋಪಗೊಂಡ, ಖೇಲೋ ಇಂಡಿಯಾ, ರಾಷ್ಟ್ರೀಯ ಕಡಲತಡಿಯ ಮಲ್ಲಕಂಬ ಸ್ಪರ್ಧೆಯಲ್ಲಿ, ಬಾಗಲಕೋಟೆ ತಾಲೂಕು, ತುಳಸಿಗೇರಿಯ, ಏಕನಾಥ ದಿವಟಗಿ ಕಂಚಿನ ಪದಕಕ್ಕೆ ಭಾಜನರಾಗಿದ್ದಾರೆ. ಬಾಗಲಕೋಟೆಯ, ವಿದ್ಯಾಗಿರಿಯಲ್ಲಿ, ಮೆಟ್ರಿಕ್ ನಂತರದ ಸರ್ಕಾರಿ ವಸತಿ ನಿಲಯದಲ್ಲಿ, ಸಿ.ಕೆ.ಚನ್ನಾಳ ಅವರ ಮಾರ್ಗದರ್ಶನದಲ್ಲಿ ದೈಹಿಕ ಶಿಕ್ಷಣ ಪಡೆಯುತ್ತಿರುವ, ಏಕನಾಥ ಅವರನ್ನು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಶಶಿಧರ ಕುರೇರ, ಸನ್ಮಾನಿಸಿ, ಅಭಿನಂದಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಏಕನಾಥ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ತುಮಕೂರಿನಲ್ಲಿ ಆಯೋಜಿತ,** ಕರ್ನಾಟಕ ಒಲಿಂಪಿಕ್ಸ್ ಕ್ರೀಡಾಕೂಟ 2025–26ರ ಜುಡೋ ಸ್ಪರ್ಧೆಯ, 52 ಕಿಲೋಗ್ರಿಂತ ಕಡಿಮೆ ತೂಕದವರ ವಿಭಾಗದಲ್ಲಿ, ವಿಜಯಪುರದ ಎಸ್. ಆರತಿ ಸ್ವರ್ಣ ಪದಕ ಗೆದ್ದಿದ್ದಾರೆ. ಜಿ. ಪರಮೇಶ್ವರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ, ಫೈನಲ್ ಪಂದ್ಯದಲ್ಲಿ, ಶಿವಮೊಗ್ಗದ ಸ್ವಾತಿ ನಾಯಕ ಬೆಳ್ಳಿ ಪದಕ ಹಾಗೂ ಮಂಡ್ಯದ ಐಶ್ವರ್ಯ ಮತ್ತು ದಾವಣಗೆರೆಯ ವಿ.ಐಶ್ವರ್ಯ ಕಂಚಿನ ಪದಕಕ್ಕೆ, ಭಾಜನರಾದರು.

<><><>

**ತುಮಕೂರು ಆತಿಥ್ಯದಲ್ಲಿ ಸಂಘಟಿತ,** ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ, ಪುರು ’ರ ರೋಡ್ ಸ್ಕೇಟಿಂಗ್ ನ, ಮಾಸ್ ಸ್ಟಾರ್ಟ್ ವಿಭಾಗದಲ್ಲಿ, ಬೆಳಗಾವಿಯ ನೀಲ್ ಐವರ್ ಡಿಸೋಜಾ ಸ್ವರ್ಣ ಪದಕ ಗೆದ್ದರು. ಧಾರವಾಡದ ಸ್ವಯಂ ಕಠಾರೆ ಬೆಳ್ಳಿ ಹಾಗೂ ಬಾಗಲಕೋಟೆಯ ಉದಯ ಕುಮಾರ ಹಂಡಿ ಕಂಚಿನ ಪದಕ ಪಡೆದರು.

<><><>

**ಮಹಿಳೆಯರ ರೋಡ್ ಸೈಕ್ಲಿಂಗ್ ನ** ಮಾಸ್ ಸ್ಟಾರ್ಟ್ ವಿಭಾಗದಲ್ಲಿ, ವಿಜಯಪುರದ ಪಾಯಲ್ ಚೌವ್ಹಾಣ ಚಿನ್ನದ ಪದಕ, ಬಾಗಲಕೋಟೆಯ ಪೂಜಾ ಮಠಪತಿ, ಬೆಳ್ಳಿ ಹಾಗೂ ನಂದಾ ಚಿಂಚಕಂಡಿ ಕಂಚಿನ ಪದಕ ಮುಡಿಗೇರಿಸಿಕೊಂಡರು.

<><><>

**ಪುರು ’ರ ರೋಡ್ ಸೈಕ್ಲಿಂಗ್ ಸ್ಪರ್ಧೆಯ,** 40 ಕಿಲೋ ಮೀಟರ್ ತಂಡ ವಿಭಾಗದಲ್ಲಿ, ಬಾಗಲಕೋಟೆ ತಂಡ, ಸ್ವರ್ಣ ಗೆದ್ದಿತು. ಮಹಿಳೆಯರ ರೋಡ್ ಸೈಕ್ಲಿಂಗ್, 40 ಕಿಲೋ ಮೀಟರ್ ತಂಡ ವಿಭಾಗದಲ್ಲಿ ಬಾಗಲಕೋಟೆ ತಂಡ ಚಿನ್ನದ ಪದಕ ಪಡೆಯಿತು.

<><><>

**ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯ,** ಸಮರ್ಥ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಕರ್ನಾಟಕ ರಾಜ್ಯ, ದೇಶಕ್ಕೆ, ದ್ವಿತೀಯ ಸ್ಥಾನ ಗಳಿಸಿದೆ. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಕರ್ನಾಟಕಕ್ಕೆ ಪ್ರಶಂಸಾ ಪತ್ರ ನೀಡಿದೆ. ರಾಜ್ಯ ಕೃಷಿ ಇಲಾಖೆ ಆಯುಕ್ತರು ಹಾಗೂ ಕೃಷಿ ನಿರ್ದೇಶಕರು, ಬೆಂಗಳೂರಿನಲ್ಲಿ ನಡೆದ, 13ನೇ ರಾಷ್ಟ್ರೀಯ ಸಮ್ಮೇಳನದಲ್ಲಿ, ಕೇಂದ್ರ ಸಹಕಾರ ಸಚಿವಾಲಯದ ಕಾರ್ಯದರ್ಶಿಗಳಿಂದ, ಪ್ರಶಂಸಾ ಪತ್ರ ಸ್ವೀಕರಿಸಿದರು. ಒಟ್ಟಾರೆ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಪ್ರಗತಿ, ರೈತರ ನೋಂದಣಿ ಮತ್ತು ಪರಿಹಾರ ವಿತರಣೆಯಲ್ಲಿ ತೋರಿದ, ಗಮನಾರ್ಹ ಸಾಧನೆಗೆ, ರಾಜ್ಯ ಕೃಷಿ ಇಲಾಖೆ, ರಾಷ್ಟ್ರ ಮಟ್ಟದ ಗೌರವ ಲಭಿಸಿದೆ. ರಾಜ್ಯದಲ್ಲಿ ಒಟ್ಟು 27 ಲಕ್ಷದ 4 ಸಾವಿರದ 166 ರೈತರು, ಬೆಳೆ ವಿಮೆ ಯೋಜನೆ ಅಡಿ, ಹೆಸರು ನೋಂದಾಯಿಸಿದ್ದು, ಆ ಪೈಕಿ, 11 ಲಕ್ಷದ 85 ಸಾವಿರದ 642 ರೈತರು ಬೆಳೆ ನ ್ಟದ ಹಿನ್ನೆಲೆ, ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಒಟ್ಟು 2 ಸಾವಿರದ 94 ಕೋಟಿ ರೂಪಾಯಿ ಮೊತ್ತದ, ವಿಮೆ ಪರಿಹಾರ ವಿತರಿಸಲಾಗಿದೆ.

<><><>

**ವಿಜಯನಗರ ಜಿಲ್ಲೆ, ಹಂಪಿಯ,** ತುಂಗಭದ್ರಾ ನದಿ ದಡದ, ಪುರಂದರ ಮಂಟಪದಲ್ಲಿ, ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ ಜರುಗಿತು. ಶ್ರೀ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ, ದಾಸ ಸಾಹಿತ್ಯ ಯೋಜಕರಿಂದ, ಅಭಿ ೀಕ ಸೇರಿದಂತೆ, ವಿಶೇಷ ಧಾರ್ಮಿಕ ವಿಧಿ–ವಿಧಾನಗಳು ಜರುಗಿದವು. ದಾಸ ಸಾಹಿತ್ಯ ಯೋಜನೆ ಅಡಿ, ವಿವಿಧ ಭಜನಾ ಮಂಡಳಿಗಳಿಂದ, ಪುರಂದರ ದಾಸರ ಕೀರ್ತನೆಗಳ, ಗಾಯನ ಹಾಗೂ ಭಜನೆ ಕಾರ್ಯಕ್ರಮ, ಶ್ರದ್ಧಾ, ಭಕ್ತಿಯಿಂದ ನಡೆಯಿತು.

<><><>

- **ಬೆಳಗಾವಿ ಜಿಲ್ಲೆ ನಂದಗಡದಲ್ಲಿ,** ವೀರಭೂಮಿ, ಸಂಗೊಳ್ಳಿ ರಾಯಣ್ಣ ವಸ್ತುಸಂಗ್ರಹಾಲಯ, ಇಂದು ಮಧ್ಯಾಹ್ನ, ಮುಖ್ಯಮಂತ್ರಿ ಲೋಕಾರ್ಪಣೆ.
- **ಚಾಲುಕ್ಯ ಉತ್ಸವ:** ಬಾಗಲಕೋಟೆ ಜಿಲ್ಲೆ, ಬಾದಾಮಿಯಲ್ಲಿ ಇಂದು ಸಂಜೆ, ಸಿದ್ದರಾಮಯ್ಯ ಚಾಲನೆ.
- **ಇ–ಆಫೀಸ್ ತಂತ್ರಾಂಶ ಬಳಕೆ:** ಕಲಬುರಗಿ ಜಿಲ್ಲಾ ಪಂಚಾಯಿತಿ, ರಾಜ್ಯಕ್ಕೆ ಪ್ರಥಮ ಸ್ಥಾನ.
- **ಕರ್ನಾಟಕ ಒಲಿಂಪಿಕ್ಸ್ ಕ್ರೀಡಾಕೂಟ, ತುಮಕೂರು:** ಜುಡೋ ಸ್ಪರ್ಧೆಯಲ್ಲಿ, ವಿಜಯಪುರದ ಎಸ್. ಆರತಿಗೆ, ಸ್ವರ್ಣ.

<><><>